ವಿ.ಎಸ್. ಹಿಂದೂಪುರ, ಬಳ್ಳಾರಿ
ಮರಣದಂಡನೆ, ಆತ್ಮಹತ್ಯೆ, ಇವೆರಡರಲ್ಲಿ ಯಾವುದು ಭಯಾನಕ?



ಆತ್ಮಹತ್ಯೆಯೇ! ಏಕೆಂದರೆ ಆತ್ಮಹತ್ಯೆಗೆ ಅಡ್ಜರ್ನ್‌ಮೆಂಟ್ ಸಿಗಲ್ಲ!

ಕಂಡಕ್ಟರ್ ರಾಜು, ಗುಬ್ಬಿ
ಅಪರಾಧ ಮಾಡಿದರೆ ಪೊಲೀಸು ಸ್ಲೇಟು ಹಿಡಿಸುತ್ತಾರೆ, ಹೃದಯ ಕದ್ದರೆ...?
ನಲ್ಲೆ ಸೌಟು ಹಿಡಿಸುತ್ತಾಳೆ!

ಮಾಲತಿರಾಜು, ಬೆಂಗಳೂರು
*ಕೊನೆಯುಸಿರೆಳೆದಾಗ ಏನೂ ಕೊಂಡೊಯ್ಯಲ್ಲ ಎಂಬ ಅರಿವಿದ್ದರೂ ಕೋಟಿ ಕೋಟಿ ಕೂಡಿಡುವ ಹಂಬಲವೇಕೆ?*
ಕೊನೆ ಉಸಿರು ಎಳೆಯುವ ಮುನ್ನ ಮಕ್ಕಳು, ವಕೀಲರು, ವೈದ್ಯರು ಎಷ್ಟು ಎಳೆಯುತ್ತಾರೆಂದು ತಿಳಿಯದ್ದರಿಂದ!

ಮಹಾವೀರ ಕಾಸರ, ಶಿವಮೊಗ್ಗ
*ಹೋಟೆಲ್ ಮಾಲೀಕನಿಗೆ ಮನೆಯಳಿಯನಾದರೆ ಹೇಗೆ?*




ಹೋಟೆಲ್‌ನಲ್ಲಿ ಮಿಕ್ಕ ಹಳಸನ್ನೇ ಮೃಷ್ಟಾನ್ನವೆಂದು ತಿನ್ನಬೇಕಾದೀತು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ನಿಮ್ಮ ಜೊತೆ ಮಲ್ಲಯುದ್ಧ ಮಾಡಬೇಕೆಂದು ನನ್ನ ಆಸೆ ಏನಂತೀರಾ?*
ನಿಮ್ಮನ್ನು ಪರಶಿವಮೂರ್ತಿ ಎಂದು ತಿಳಿದಿದ್ದೆ, ಪರಚುವಮೂರ್ತಿ ಎಂದು ಈಗಲೇ ಗೊತ್ತಾದದ್ದು!

ಶರಣಪ್ಪ. ಚಟ್ನಿ, ಗೋಲಗೇರಿ
*ಭಾರತ ಸಂಪೂರ್ಣ ಪ್ರಮೀಳಾ ದೇಶವಾದರೆ ಪುರುಷ ರಾಜಕಾರಣಿಗಳಿಗೇನು ಕೆಲಸ?*
ಅವರ ಮೇಕಪ್ ಕೆಡದಂತೆ ನೋಡಿಕೊಳ್ಳುವುದು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪಾ! ಮಾನವನು ನಗುತ್ತಾ ಮಾಡಿದ್ದನ್ನು ಅಳುತ್ತಾ ಅನುಭವಿಸುತ್ತಾನಂತೆ; ಇದಕ್ಕೆ ಉದಾಹರಣೆ?*
ಹೊಸರುಚಿ!

ಪಿ.ಜೆ. ರಾಘವೇಂದ್ರ, ಮೈಸೂರು
*ಇಲ್ಲೊಬ್ಬರು ಉಪನೋಂದಣಾಧಿಕಾರಿ ಪ್ರಮೋಷನ್ ಬೇಡವೆನ್ನುತ್ತಿದ್ದಾರೆ, ಏಕಿರಬಹುದು?*
ಈ ಹುದ್ದೆಯಲ್ಲಿನ ಸೌ–ಲಭ್ಯಗಳೇ ಸಾ–ಕಂತೆ!

ಮನೋರಮಾ ಪ್ರಭು, ಹೊನ್ನಾವರ
*ಮನಸ್ಸಿದ್ದರೆ ಮಾರ್ಗ, ಮೊಬೈಲಿದ್ದರೆ...?*
ಸುಳ್ಮಾರ್ಗ!

ಅರಕೆರೆ ಪಿ. ಸುರೇಶ್, ಭದ್ರಾವತಿ
*ನಮ್ಮ ದೇಶದ ಅತಿ ಘೋರ ದುರಂತ ಯಾವುದು?*
ಅನುವಂಶೀಯ ರಾಜಕೀಯ!

ಬಾ.ರಂ. ಸುರೇಶ್, ಶಿವಮೊಗ್ಗ
*ಮದುವೆ ಎನ್ನುವುದು ಪೂರ್ವಜನ್ಮದ ಪುಣ್ಯವೆನ್ನುತ್ತಾರಲ್ಲಾ, ಇದು ನಿಜವೇ ಶಿವಾ?*
ನಿಜವೇ; ಆದರೆ ಬಹಳ ವಿಚಿತ್ರವಾದ ಪುಣ್ಯ–ಪುಣ್ಯ ಸಂಪಾದಿಸಿದ ವರ್ಷಕ್ಕೇ ಪಾಪ ಹೆಗಲೇರುತ್ತೆ!

ಎನ್. ಪ್ರಕಾಶ್, ದೇವನಹಳ್ಳಿ
*ಪ್ರೀತಿ ಎನ್ನುವುದು ವಾಸಿಯಾಗದ ರೋಗವಂತೆ, ಹಾಗಾದರೆ ಅದಕ್ಕೆ ಔಷಧ ಏನು ಸಾರ್?*
ಹೃದಯಗಳ ಬೆಸುಗೆ!

ರಾಜೇಂದ್ರ ಹೆಗಡೆ, ಹಾವೇರಿ
*ಕಾಡೆಗೂಡೆ, ಸವಾಲ್ ಜವಾಬ್, ಕೇಳಿ ಅಂಕಣಗಳಿಗಿಂತಲೂ ನೀವು ಕೇಳಿದಿರಿ? ನಂಬರ್ ಒನ್ ಅಂತೆ, ಸಂತೋಷವೆ?*
ನೂರು ಮರ, ನೂರು ತರ, ಪ್ರತಿ ಹಣ್ಣೂ ರುಚಿ ಮಧುರ! ಹೋಲಿಸಲೆಂದಾದರೂ ಅಷ್ಟನ್ನೂ ಓದುವ ಕನ್ನಡಿಗರಿಗೆ ನನ್ನ ನಮನ!

ಕಾ. ಪ್ರಕಾಶ್, ಕನಕಪುರ
*ಬದುಕಿಗಾಗಿ ತಿನ್ನಬೇಕೋ, ತಿನ್ನುವುದಕ್ಕಾಗಿ ಬದುಕಬೇಕೊ?*
thin ಆಗಿರುವಂತೆ ತಿನ್ನಿ; ಬದುಕಿನಲ್ಲಿ thick ಕಾಟ ತಪ್ಪುತ್ತದೆ!

## ಬಹುಮಾನಿತ ಪ್ರಶ್ನೆ

ಕೇಶವ ಎನ್. ಪೈ, ಕಾಸರಕೋಡ
*ಪಾಲಕರಿಂದ ತುತ್ತು ತಿಂದ ಮಕ್ಕಳೇ ಭವಿಷ್ಯದಲ್ಲಿ ಪಾಲಕರಿಗೆ ಕುತ್ತು ಆಗುವುದೇಕೆ?*
ಕೈಯಾರೆ ಬೆಳೆಸಿದ ಮರ ಪಾಯಕ್ಕೆ ಅಪಾಯ ತರುವುದು ಪ್ರಕೃತಿ ನಿಯಮ!

ಎನ್.ಆರ್. ದೇಸಾಯಿ, ರಾಯಚೂರು
*ಹಿಂದಿನ ರಾಜರು ಮಾರುವೇಷದಲ್ಲಿ ಹೋಗಿ ಜನರ ಸಂಕಷ್ಟಗಳನ್ನು ಆಲಿಸುತ್ತಿದ್ದರು; ಈಗಿನ ರಾಜಕಾರಣಿಗಳು?*
ಬಹುವೇಷ ಧರಿಸಿ ಜನರ ಸಂಪತ್ತುಗಳನ್ನು ಬೋಳಿಸುತ್ತಾರೆ!

ಎಂ.ಬಿ. ಖೋದಾನಪುರ, ಸವದತ್ತಿ
*ಭೂಲೋಕ ಮತ್ತು ದೇವಲೋಕದವರನ್ನು ಅದಲು ಬದಲು ಮಾಡಿದರೆ ಏನಾಗುತ್ತೆ?*
ಮಲ್ಲಿಕಾ ಶೆರಾವತ್‌ಳ ಡ್ಯಾನ್ಸ್ ನೋಡಲು ದೇವಲೋಕದ ಸಭೆ ಹೌಸ್‌ಫುಲ್ ಆಗತ್ತೆ!

ವಿದ್ಯಾ ಎನ್. ಪೈ, ಕಾಸರಕೋಡ
*ಮಾನವ ಸಸ್ಯಾಹಾರಿಯೋ, ಮಾಂಸಾಹಾರಿಯೋ?*



ಸಸ್ಯಾಹಾರಿ ಪ್ರಾಣಿಗಳ ಮಾಂಸಾಹಾರಿ!

ಗೀತಾ ಎಸ್. ಕೆ, ಹಾಸನ
*ಒಂದು ಕೆಲಸ, ಹೆಂಡತಿ ಮಾಡಿದರೆ ಸರಿ, ಗಂಡ ಮಾಡಿದರೆ ತಪ್ಪು; ಯಾವುದದು?*
ಹುಚ್ಚಮ್ಮ! ಗಂಡ ಏನು ಮಾಡಿದರೂ ತಪ್ಪೇ... Woman is always right, even when she is wrong!

ಹೆಚ್. ಆರ್. ಕಡಿವಾಲ, ಬಾದಾಮಿ
*ಅಸ್ಪೃಶ್ಯತೆ ಅಳಿಸಲು ಏನು ಮಾಡಬೇಕು?*
ಎಲ್ಲಾ ಜನಗಳನ್ನು ಸೇರಿಸಿ ಕೊಕ್ಕೋ ಆಡಿಸಿ; ಎಲ್ಲರೂ, ಎಲ್ಲರನ್ನೂ ಮುಟ್ಟಿದಂತಾಗಿ ಅಸ್ಪೃಶ್ಯತೆ ತೊಲಗುತ್ತದೆ!

ಮ. ಶಿವಸ್ವಾಮಿ ಕರೋಹಟ್ಟಿಕರ್, ಕರೋಹಟ್ಟಿ
*ಈ ಜನ ಬುದ್ಧ, ಬಸವ, ಅಂಬೇಡ್ಕರ್‌ರ ಚಾರಿತ್ರ್ಯವನ್ನೇಕೆ ಗಮನಿಸುವುದಿಲ್ಲ?*
ಚಾರಿತ್ರ್ಯವಧೆ ಮಾಡಲಾಗದ ಚಾರಿತ್ರ್ಯ ಸೀರಿಯಲ್ ನವರಿಗೂ ಬೇಡವಂತೆ!

■ ರಾಮ್